1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 10

CW- 07

ಪ್ರ. ಬೋ. ದಿನಾಂಕಃ 22-10-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಮಂಜುನಾಥ |
| ತಂದೆ/ಗಂಡನ ಹೆಸರು | : | ಕರಿಯಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಆಟೋಪಿ ಚಾಲಕ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನಗೆ ಗೊತ್ತು. ಚಾಸಾ-6 ರಾಘವೇಂದ್ರ ನನಗೆ ಗೊತ್ತು.

ದಿ.16-05-2023 ರಂದು ಹರಿಹರ, ಪ್ರಶಾಂತ್ ನಗರ, ಸಕ್ಕರೆ ಫ್ಯಾಕ್ಟರಿ ರಸ್ತೆಗೆ ಕರೆಸಿದ್ದರು. ಸದರಿ ದಿನಾಂಕದಂದು ನಾನು ಹರಿಹರದಲ್ಲಿದ್ದೆ. ಆಗ ನನ್ನ ಸೊಸೆ ಲಕ್ಷ್ಮಿ ಸಹ ಹಾಜರಿದ್ದು ಕಲ್ಲನ್ನು ತೋರಿಸಿದಳು. ನನ್ನ ಗಂಡನನ್ನು ಇಲ್ಲೇ ಹೊಡೆದಿದ್ದು ಎಂದು ತೋರಿಸಿದ್ದು , ಪೊಲೀಸರು ಅಲ್ಲಿ ಮಹಜರ್ ಮಾಡಿ , ಒಂದು ಸಿಮೆಂಟ್ ಮೋಲ್ಡ ಕಲ್ಲನ್ನು ವಶಪಡಿಸಿಕೊಂಡರು. ಆ ದಿನ ಮಾಡಿದ ಮಹಜರ್ ನೋಡುತ್ತಿದ್ದು , ಅದರಲ್ಲಿ ನನ್ನ ರುಜು ಇದ್ದು, ನಿಪಿ.7(ಬಿ) ಎಂದು ಗುರುತಿಸಲಾಯಿತು. ನಿಪಿ.8 ನಕ್ಷೆ ನೋಡುತ್ತಿದ್ದು, ಅದರಲ್ಲಿನ ನನ್ನ ರುಜುವನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಪಿ.9 ಮತ್ತು 10 ಎಂದು ಈಗಾಗಲೇ ಗುರುತಿಸಲಾಗಿದೆ. ಆ ದಿನ ಪೊಲೀಸರು ಅಮಾನತ್ತು ಪಡಿಸಿಕೊಂಡ ಕಲ್ಲನ್ನು ನೋಡುತ್ತಿದ್ದು, ಅದನ್ನು ಮು.ಮಾ.2 ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿ ನನ್ನ ಸಹಿ ಇದ್ದ ಚೀಟಿಯನ್ನು ಅಂಟಿಸಲಾಗಿರುತ್ತದೆ.

<u>ಪಾಟೀಸವಾಲುಃ</u>– 1 ಮತ್ತು 2 ನೇ ಆರೋಪಿತರಪರ ಶ್ರೀ ಪಿ.ಬಿ ವಕೀಲರಿಂದ.

ರಾಘವೇಂದ್ರ ಇವರ ತಂದೆಯ ಹೆಸರು ಕೃಷ್ಣಪ್ಪ ಎಂದು ಇರುತ್ತದೆ ಎನ್ನುವದರ ಬಗ್ಗೆ ನನಗೆ ಗೊತ್ತಿಲ್ಲ. ಕೃಷ್ಣಪ್ಪ ಮತ್ತು ಮೃತ ಕುಮಾರ ಇವರ ತಂದೆ ಇಬ್ಬರು ಅಣ್ಣತಮ್ಮಂದಿರು ಎನ್ನುವುದು ನನಗೆ ಗೊತ್ತಿಲ್ಲ.

ಪೊಲೀಸರು ಮಹಜರ್ ಗೆ ಬರಲು ನನಗೆ ಲಿಖಿತ ನೋಟೀಸು ನೀಡಿದ್ದರು. ಹರಿಹರದ ಶಿಬಾರದ ಹತ್ತಿರ ನನ್ನ ಮಾವನ ಮನೆಯಲ್ಲಿ ನಾನು ವಾಸವಾಗಿದ್ದೆ. ಅಲ್ಲಿಗೆ ಪೊಲೀಸರು ಬಂದು ನನಗೆ ನೋಟೀಸು ಕೊಟ್ಟಿರುತ್ತಾರೆ ಹಾಗೂ ಫೋನ್ ಮೂಲಕ ಸಹ ನನಗೆ ತಿಳಿಸಿರುತ್ತಾರೆ. ಪೊಲೀಸ್ ಅಧಿಕಾರಿಗಳ ಹೆಸರು ನನಗೆ ಗೊತ್ತಿಲ್ಲ. ಫೋನ್ ಮಾಡಿದ ಪೊಲೀಸ್ ಅಧಿಕಾರಿಯ ಹೆಸರು ಗೊತ್ತಿಲ್ಲ. ಸ್ಥಳಕ್ಕೆ ಹೋದಾಗ ಮಧ್ಯಾಹ್ನ 2–45 ಗಂಟೆಯಾಗಿತ್ತು. ಆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದರು. ರಾಘವೇಂದ್ರ ಯಾವಾಗ ಬಂದ ಎಂಬುದನ್ನು ನಾನು ನೋಡಿಲ್ಲ. ಆ ದಿನ ನನ್ನ ತಮ್ಮನ ಮನೆಯಲ್ಲಿ 3 ನೇ ದಿನದ ಕಾರ್ಯ ನಡೆಯುತ್ತಿತ್ತು.

ಹರಿಹರ ಕಡೆಯಿಂದ ಪ್ರಶಾಂತ ನಗರಕ್ಕೆ ಹೋದರೆ ಪ್ರಶಾಂತ್ ನಗರದ ಕೊನೆಯ ಮನೆ ಮೃತ ಕುಮಾರನ ಮನೆ ಇರುತ್ತದೆ. ಅಲ್ಲಿಂದ ದೊಡ್ಡಬಾತಿಯ ಫ್ಯಾಕ್ಟರಿ ರಸ್ತೆಯಲ್ಲಿ ಯಾವುದೇ ಮನೆಗಳು ಇರುವುದಿಲ್ಲ. ಅಲ್ಲಿ ಸಂಜೆ 6–00 ಗಂಟೆ ನಂತರ ಜನರು ಯಾರೂ ಓಡಾಡುವುದಿಲ್ಲ , ಮುಖ್ಯ ರಸ್ತೆ ಮುಖಾಂತರ ಓಡಾಡುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು – ನಾನು ದಾವಣಗೆರೆ ವಾಸಿಯಾಗಿರುವುದರಿಂದ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಮೃತ ಕುಮಾರನ ಮನೆಯಿಂದ ಹರಿಹರ ದಾವಣಗೆರೆ ಮುಖ್ಯ ರಸ್ತೆ ಚಾನಲ್ ವರೆಗೆ ಸಿಮೆಂಟ್ ರಸ್ತೆಯಾಗಿರುತ್ತದೆ ಎನ್ನುವುದು ನಿಜ. ನಾವು ಅದೇ ರಸ್ತೆ ಮುಖಾಂತರ ಓಡಾಡುತ್ತೇವೆ ಎನ್ನುವುದು ನಿಜ.

ಮು.ಮಾ.2 ಕಲ್ಲಿನ ಮೇಲೆ ರಕ್ತವಾಗಿರಲಿಲ್ಲ. ಸದರಿ ಮು.ಮಾಲಿಗೆ ನನ್ನ ಸಹಿ ಇದ್ದ ಚೀಟಿ ಅಂಟಿಸಿರುತ್ತಾರೆ. ಕಲ್ಲಿನ ಮೇಲೆ ನನ್ನ ಸಹಿ ಮಾಡಿದ ಚೀಟಿ ಅಂಟಿಸಿಲ್ಲ. ಆದರೆ ಕವರ್ ಮೇಲೆ ಇದೆ. ಸದರಿ ಕಲ್ಲಿನಲ್ಲಿ ಜೆಲ್ಲಿ ಕಲ್ಲಿನ ಅಂಚುಗಳು ಇವೆ. ಮು.ಮಾ.2 ರಿಂದ ಒಬ್ಬ ವ್ಯಕ್ತಿಯ ತಲೆ ಮೇಲೆ ಹಾಕಿದರೆ ತಲೆ ಛಿದ್ರವಾಗುತ್ತದೆ, ಅದೇ ಪ್ರಕಾರ ಕಾಲಿನ ಮೇಲೆ ಹಾಕಿದರೆ ಕಾಲು ಸಹ ಛಿದ್ರವಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಕಲ್ಲು ತೆಗೆದುಕೊಂಡ ಸ್ಥಳದಲ್ಲಿ ರಕ್ತ ಬಿದ್ದಿರಲಿಲ್ಲ. ಸಾಕ್ಷಿಗೆ ನೋಟೀಸನ್ನು ತೋರಿಸಲಾಗಿ ತಿದ್ದುಪಡಿಯಾಗಿದೆ ಎಂದು

ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದಿದ್ದು , ಸ್ಥಳದಲ್ಲಿ ಲ್ಯಾಪ್ ಟಾಪ್ ಮುಖಾಂತರ ಬೆರಳಚ್ಚು ಮಾಡಿದರು. ಮಾಹಿತಿಯನ್ನು ನನ್ನ ಸೊಸೆ ಲಕ್ಷ್ಮಿ ಹೇಳಿದರು, ಪೊಲೀಸರು ಬೆರಳಚ್ಚು ಮಾಡಿದರು. ಜೀಪಿನಲ್ಲಿ ಪ್ರಿಂಟರ್ ಇದ್ದು , ಪ್ರಿಂಟರ್ ನಲ್ಲಿ ಪ್ರತಿ ತೆಗೆದಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ನಿಪಿ.7 ಮಹಜರಿ ಮಾಡಿಲ್ಲ ಎನ್ನುವುದು ಸುಳ್ಳು. ಮಹಜರ್ ಮಾಡಿ , ಮು.ಮಾ.2 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಈ ಕೇಸಿನಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ನನ್ನ ಸೊಸೆ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ಆ ಸಮಯದಲ್ಲಿ ಮೃತ ಕುಮಾರನ ಅಣ್ಣಂದಿರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ನಿಪಿ.8 ನಕಾಶೆಯನ್ನು ತಯಾರು ಮಾಡಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 09

CW- 04

ಪ್ರ. ಬೋ. ದಿನಾಂಕಃ 22-10-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಭಿಮೇಶ್ |
| ತಂದೆ/ಗಂಡನ ಹೆಸರು | : | ಡಿ ವೆಂಕಟಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಗುಮಾಸ್ತರು, ತಾಲ್ಲೂಕು ಕಛೇರಿ, |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-5 ನನಗೆ ಗೊತ್ತು.

ತಹಶೀಲ್ದಾರರ ಆದೇಶದ ಮೇರೆಗೆ ದಿ.15-05-2023 ರಂದು ದಾವಣಗೆರೆ ಸಿಜಿ ಆಸ್ಪತ್ರೆಯ ಶವಗಾರಕ್ಕೆ ಹೋಗಿದ್ದೆ. ಅಲ್ಲಿ ಕುಮಾರ್ ಎಂಬುವವರ ಮೃತ ದೇಹ ಇತ್ತು. ಅವನ ಎದೆಗೆ , ಕಣ್ಣಿಗೆ , ಕುತ್ತಿಗೆ ಗಾಯವಾಗಿತ್ತು. ಪೊಲೀಸರು ಇದ್ದು , ಆಸ್ತಿ ವಿಚಾರವಾಗಿ ಕೊಲೆಯಾಗಿದೆ ಎಂದು ಗೊತ್ತಾಯಿತು. ಪೊಲೀಸರು ಪರಿಶೀಲನೆ ಮಾಡಿ , ಶವ ತನಿಖಾ ವರದಿ ತಯಾರಿಸಿ, ನನ್ನ ಸಹಿ ಪಡೆದಿರುತ್ತಾರೆ. ಸದರಿ ವರದಿ ನೋಡುತ್ತಿದ್ದು, ಅದನ್ನು ನಿಪಿ.24 ಎಂದು ನನ್ನ ರುಜುವನ್ನು ನಿಪಿ.24(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.2 ಫೋಟೋ ತೆಗೆಸಿರುತ್ತಾರೆ.

ನಂತರ ಪೊಲೀಸರು ನನ್ನನ್ನು ಮತ್ತು ಚಾಸಾ-5 ರವರನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೃತನ ಹೆಂಡತಿ ಲಕ್ಷ್ಮಿ ಸಹ ಹಾಜರಿದ್ದರು. ಸ್ಥಳದಲ್ಲಿ ರಕ್ತದ ಕಲೆಯಾಗಿದ್ದು , ಅದು ಸಾರ್ವಜನಿಕರು ಓಡಾಡುವ ಸ್ಥಳವಾಗಿದ್ದರಿಂದ ಸ್ವಚ್ಛಗೊಳಿಸುವಾಗ ಒಂದು ಜೊತೆ ಚಪ್ಪಲಿ ಇತ್ತು , ಅದನ್ನು ತೆಗೆದು ಸ್ಟ್ಯಾಂಡ್ ನಲ್ಲಿ ಇಟ್ಟಿದ್ದು , ಆ ಚಪ್ಪಲಿಯನ್ನು ಬಸವರಾಜ್ ಎಂಬುವವರು ಪೊಲೀಸರಿಗೆ ಹಾಜರುಪಡಿಸಿದರು,

ಪೊಲೀಸರು ಚಪ್ಪಲಿಗೆ ಸಂಬಂಧಪಟ್ಟಂತೆ ಮಹಜರ್ ಮಾಡಿದರು. ಇದೇ ಸ್ಥಳದಲ್ಲಿ ನನ್ನ ಗಂಡನನ್ನು ಕೊಲೆ ಮಾಡಿದ್ದು ಇರುತ್ತದೆ ಎಂದು ಲಕ್ಷ್ಮಿ ಸ್ಥಳ ತೋರಿಸಿ ಹೇಳಿದರು. ಇದಕ್ಕೆ ಸಂಬಂಧಪಟ್ಟಂತೆ ನಿಪಿ.3 ಮಹಜರ್ ಮಾಡಿದ್ದು , ಅದರಲ್ಲಿ ನನ್ನ ರುಜು ಇದ್ದು , ರುಜುವನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ನಿಪಿ.4 ನಕ್ಷೆ ನೋಡುತ್ತಿದ್ದು , ನನ್ನ ರುಜು ನಿಪಿ.4(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.5 ಮತ್ತು 6 ಫೋಟೋ ತೆಗೆಯಲಾಗಿರುತ್ತದೆ. ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ಚಪ್ಪಲಿ ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದೆ ಇದ್ದು, ಮು.ಮಾ.1 ಎಂದು ಈಗಾಗಲೇ ಗುರುತಿಸಲಾಗಿದೆ.

<u>ಪಾಟೀಸವಾಲುಃ</u>– 1 ಮತ್ತು 2 ನೇ ಆರೋಪಿತರಪರ ಶ್ರೀ ಪಿ.ಬಿ ವಕೀಲರಿಂದ.

ನಾನು ಪ್ರತಿ ದಿನ ನಮ್ಮ ಕಛೇರಿಗೆ ಬೆಳಿಗ್ಗೆ 10–00 ಗಂಟೆಗೆ ಹೋಗುತ್ತೇನೆ. ಹಾಜರಾಗಿದ್ದರ ಬಗ್ಗೆ ಹಾಜರಿ ಪುಸ್ತಕದಲ್ಲಿ ಸಹಿ ಮಾಡುತ್ತೇವೆ. ದಿ.15–05–2023 ರಂದು ಬೆಳಿಗ್ಗೆ 10–00 ಗಂಟೆಗೆ ನಾನು ಕೆಲಸಕ್ಕೆ ಕಛೇರಿಗೆ ಹೋಗಿರುತ್ತೇನೆ. ನಮ್ಮ ತಹಶೀಲ್ದಾರರು ಪೊಲೀಸರು ಕರೆದಿದ್ದು , ಅದಕ್ಕೆ ಹೋಗುವ ಬಗ್ಗೆ ಲಿಖಿತ ಆದೇಶ ಮಾಡಿಲ್ಲ , ಆದರೆ ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ತಹಶೀಲ್ದಾರರ ಮೌಖಿಕ ಆದೇಶದ ಮೇರೆಗೆ ಕರ್ತವ್ಯದಿಂದ ನಾನು ಬೇರೆ ಕಡೆ ಹೋಗುಬೇಕಾಗದಲ್ಲಿ ಕಛೇರಿಯಲ್ಲಿ ನಡಾವಳಿ ಪುಸ್ತಕದಲ್ಲಿ ಬರೆದು ಹೋಗಬೇಕು ಎನ್ನುವುದು ನಿಜ. ನಡುವಳಿಕೆ ಪುಸ್ತಕದಲ್ಲಿ ನಾನು ಬರೆದಿಲ್ಲ , ಆದರೆ ತಹಶೀಲ್ದಾರರು ಹೇಳಿದ್ದರಿಂದ ನಾನು ಹೋಗಿದ್ದೇನೆ. ಆ ದಿನ ಮುಂಜಾನೆ 11–00 ಗಂಟೆಗೆ ತಹಶೀಲ್ದಾರರು ನನಗೆ ಹೇಳಿದ್ದರು. ಆ ದಿನ ಬೆಳಿಗ್ಗೆ 10–00 ರಿಂದ 11–00 ಗಂಟೆ ವರೆಗೆ ನಾನು ನಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಅದೇ ದಿನ ಚಾಸಾ–5 ಇವರು ಸಹ ನಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ನಾನು ಮತ್ತು ಚಾಸಾ–5 ಇಬ್ಬರೂ ಪೊಲೀಸರ ಜೀಪಿನಲ್ಲಿ ದಾವಣಗೆರೆ ಸಿಜಿ ಆಸ್ಪತ್ರೆಗೆ ಬಂದೆವು. ಪೊಲೀಸರು ನಮಗೆ ಮೊದಲು ಶವ ತನಿಖೆಗೆ ಬರಬೇಕು ಎಂದು ಲಿಖಿತ ನೋಟೀಸು ಕೊಟ್ಟಿದ್ದರು. ಆ ದಿನ ಬೆಳಿಗ್ಗೆ 11–00 ಗಂಟೆಗೆ ನೋಟೀಸು ಕೊಟ್ಟಿದ್ದರು. ನೋಟೀಸಿನಲ್ಲಿ 12–00 ಗಂಟೆಗೆ ಇರಬೇಕು ಎಂದು ಸಮಯ ನಮೂದು ಮಾಡಿದ್ದರು. ಆ ದಿನ ನಾವು ಆಸ್ಪತ್ರೆಗೆ ಹೋದಾಗ ಮಧ್ಯಾಹ್ನ 12–00 ಗಂಟೆಯಾಗಿತ್ತು.

ಪೊಲೀಸರು ನಿಪಿ.24 ಮಹಜರ್ ಮಾಡಿ, ಯಾವುದೇ ವಸ್ತುಗಳನ್ನು ತೆಗೆದುಕೊಂಡಿರುವುದಿಲ್ಲ. ಸದರಿ ವರದಿ ತಯಾರು ಮಾಡುವ ಸಮಯದಲ್ಲಿ ನಾಲ್ಕು ಜನ ಪೊಲೀಸ್ ಅಧಿಕಾರಿಗಳು ಇದ್ದರು. ನಿಪಿ.24 ನ್ನು ಲ್ಯಾಪ್ ಟಾಪ್ ಮುಖಾಂತರ ಬೆರಳಚ್ಚು ಮಾಡಿದರು. ಪ್ರಿಂಟ್ ಸಹ ಅಲ್ಲೇ ತೆಗೆದರು. ನಮ್ಮನ್ನು ಹೊರತು ಪಡಿಸಿ ಮೃತನ ಹೆಂಡತಿ ಲಕ್ಷ್ಮಿ ರವರನ್ನು ವಿಚಾರಣೆ ಮಾಡಿದರು. ಹೊರಗಡೆ ಮೃತನ ಸಂಬಂಧಿಕರು ಇದ್ದರು. ಅವರನ್ನು ಸಹ ವಿಚಾರಣೆ ಮಾಡಿದರು. ಅವರ ಹೆಸರು ನನಗೆ ಗೊತ್ತಿಲ್ಲ. ನಮ್ಮನ್ನು ಮತ್ತು ಲಕ್ಷ್ಮಿಯನ್ನು ಹೊರತುಪಡಿಸಿ ವರದಿ ತಯಾರು ಮಾಡುವಾಗ ಬೇರೆ ಯಾರನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ನಮ್ಮಸಮಕ್ಷಮ ನಿಪಿ.24 ವರದಿ ತಯಾರು ಮಾಡಿಲ್ಲ ಎನ್ನುವುದು ಸರಿಯಲ್ಲ. ಈ ಕೇಸಿಗಾಗಿ ಸದರಿ ವರದಿಯನ್ನು ಸೃಷ್ಟಿಸಲಾಗಿದೆ ಎನ್ನುವುದು ಸುಳ್ಳು. ಇಷ್ಟೇಲ್ಲ ಆಗುವದರೊಳಗೆ ಸಮಯ 1-00 ಗಂಟೆಯಾಯಿತು.

ದಾವಣಗೆರೆ ಸಿಜಿ ಆಸ್ಪತ್ರೆಯಿಂದ ಹರಿಹರ ಆಸ್ಪತ್ರೆಗೆ ಹೋಗಲು ನಮ್ಮ ಮೇಲಾಧಿಕಾರಿಗಳು ನಮಗೆ ಮೌಖಿಕವಾಗಿ ಆದೇಶದ ಮಾಡಿರುತ್ತಾರೆ , ಲಿಖಿತವಾಗಿ ಆದೇಶ ಮಾಡಿರುವುದಿಲ್ಲ. ಹರಿಹರ ಆಸ್ಪತ್ರೆಗೆ ಹೋದಾಗ ಸಮಯ ಮಧ್ಯಾಹ್ನ 1-10 ಗಂಟೆಯಾಗಿತ್ತು. ದಾವಣಗೆರೆ ಸಿಜಿ ಆಸ್ಪತ್ರೆ ಬಿಟ್ಟಾಗ ಸಮಯ ಸುಮಾರು ಮಧ್ಯಾಹ್ನ 1-00 ಗಂಟೆ. ನಾನು , ಚಾಸಾ-5 ಮತ್ತು ಪೊಲೀಸ್ ಸಿಬ್ಬಂದಿ ಜೊತೆ ಹರಿಹರ ಆಸ್ಪತ್ರೆಗೆ ಬಂದೆವು. ಮೃತನ ಪತ್ನಿ ಲಕ್ಷ್ಮಿ ಇವರು ಯಾರ ಜೊತೆ ಹರಿಹರ ಆಸ್ಪತ್ರೆಗೆ ಬಂದರು ಎಂದು ನನಗೆ ಮಾಹಿತಿ ಇಲ್ಲ. ಹರಿಹರ ಆಸ್ಪತ್ರೆಗೆ ನಾವು ಹೋಗುವ ಪೂರ್ವದಲ್ಲಿ ಲಕ್ಷ್ಮಿ ಆಸ್ಪತ್ರೆಯಲ್ಲಿದ್ದರು. ನಾವು ದಾವಣಗೆರೆ ಆಸ್ಪತ್ರೆ ಬಿಟ್ಟಾಗ ಲಕ್ಷ್ಮಿ ಇವರು ಆಸ್ಪತ್ರೆಯಲ್ಲಿರಲಿಲ್ಲ, ಅಷ್ಟರಲ್ಲಿ ಹೋಗಿದ್ದರು. ಹರಿಹರದ ಆಸ್ಪತ್ರೆಯ ಓಪಿಡಿ ವಿಭಾಗದಲ್ಲಿ ಚಪ್ಪಲಿ ಸ್ಟ್ಯಾಂಡ್ ಇದ್ದು, ಅಲ್ಲಿಂದ ಬಸವರಾಜ್ ಇವರು ಚಪ್ಪಲಿ ಹಾಜರುಪಡಿಸಿದರು. ಹಾಜರುಪಡಿಸಿದ ಚಪ್ಪಲಿ ಹೊರತುಪಡಿಸಿ , ಸದರಿ ಚಪ್ಪಲಿ ಸ್ಟ್ಯಾಂಡ್ ನಲ್ಲಿ ಬೇರೆ ಯಾವುದೇ ಚಪ್ಪಲಿಗಳು ಇರಲಿಲ್ಲ. ನಿಪಿ.5 ಮತ್ತು 6 ಫೋಟೋದಲ್ಲಿ ಚಪ್ಪಲಿ ಸ್ಟ್ಯಾಂಡ್ ಕಾಣುತ್ತಿಲ್ಲ. ಆದರೆ ಸೈಡಿಗೆ ಇದೆ. ಚಪ್ಪಲಿ ಸ್ಟ್ಯಾಂಡ್ ನಿಂದ ಹೊರಗೆ ಚಪ್ಪಲಿ ತೆಗೆದ ಬಗ್ಗೆ ಫೋಟೋ ತೆಗೆದ ಬಗ್ಗೆ ಮಾಹಿತಿ ಇಲ್ಲ. ಚಪ್ಪಲಿಗಳನ್ನು ಚಪ್ಪಲಿ ಸ್ಟ್ಯಾಂಡಿನಲ್ಲಿ ಬಾಕ್ಸನಲ್ಲಿಟ್ಟಿದ್ದರು. ಪೊಲೀಸರು ಚಪ್ಪಲಿ ಇಟ್ಟಿದ್ದ ಬಾಕ್ಸನ್ನು ಸಹ ಅಮಾನತ್ತುಪಡಿಸಿಕೊಂಡರು. ಚಪ್ಪಲಿಯ ಬಣ್ಣ ಮತ್ತು ಅದು ಯಾವ ಕಂಪನಿಯದು ಎಂದು ಮಾಹಿತಿ ಇಲ್ಲ. ನ್ಯಾಯಾಲಯದ ಮುಂದೆ ಇರುವ ಚಪ್ಪಲಿಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ, ಆದರೆ ಚಪ್ಪಲಿ ಇಟ್ಟಿದ್ದ ಬಾಕ್ಸ್

ನ್ಯಾಯಾಲಯದ ಮುಂದೆ ಇಲ್ಲ. ನನ್ನ ಮತ್ತು ಇನ್ನೊಬ್ಬ ಸೈಯದ್ ಇವರ ಸಹಿಯನ್ನು ಚೀಟಿಗೆ ಪಡೆದು , ಚೀಟಿಯನ್ನು ಚಪ್ಪಲಿಗೆ ಅಂಟಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಲ್ಯಾಪ್ ಟಾಪ್ ನ್ನು ಒಂದೇ ಕೈ ಯಲ್ಲಿ ಹಿಡಿದು ಟೈಪ್ ಮಾಡಲು ಬರುವುದಿಲ್ಲ, ಆದರೆ ಪೊಲೀಸರು ಮಾಡಿದ್ದಾರೆ. ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚನ್ನು ಕುಳಿತು ಮಾಡಿರುತ್ತಾರೆ. ಟೈಪ್ ಮಾಡುವ ಸಮಯದಲ್ಲಿ ನಿಪಿ.5 ಫೋಟೋ ತೆಗೆಸಿರುತ್ತಾರೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಲ್ಯಾಪ್ ಟಾಪ್ ನಲ್ಲಿ ನನ್ನ ಸಮಕ್ಷಮ ನಿಪಿ.3 ಮಹಜರನ್ನು ಬೆರಳಚ್ಚು ಮಾಡಿಲ್ಲದಿದ್ದರೂ ಸಹ ಲ್ಯಾಪ್ ಟಾಪ್ ಇದೆ ಎಂದು ತೋರಿಸಲು ನಿಪಿ.5 ಫೋಟೋ ತೆಗೆದಿರುತ್ತಾರೆ ಎನ್ನುವುದು ಸುಳ್ಳು. ಬೆರಳಚ್ಚು ಮಾಡಿದಂತಹ ಕಾಪಿಯ ಪ್ರಿಂಟನ್ನು ಆಸ್ಪತ್ರೆಯಲ್ಲಿ ತೆಗೆದರು. ಮಹಜರ್ ಗೆ ನಾನು , ಸೈಯದ್ ರೋಷನ್ ಮತ್ತು ಪೊಲೀಸ್ ಅಧಿಕಾರಿಗಳು ಸಹಿ ಮಾಡಿರುತ್ತೇವೆ. ಬೇರೆ ಆಸ್ಪತ್ರೆ ಸಿಬ್ಬಂದಿಗಳು ಸಹಿ ಮಾಡಿರಬಹುದು. ಆದರೆ ನಾನು ನೋಡಿಲ್ಲ.

ಪೊಲೀಸ್ ಸಿಬ್ಬಂದಿಗಳು ಹೇಳಿದರು, ಪೊಲೀಸರೇ ಬೆರಳಚ್ಚು ಮಾಡಿರುತ್ತಾರೆ. ಚಪ್ಪಲಿಯ ಕಂಪನಿ ಯಾವುದು ಎಂದು ಗೊತ್ತಿಲ್ಲ. ಪೊಲೀಸರು ಮಹಜರ್ ನಲ್ಲಿ ಏನೇನು ಬರೆದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ಮಾಡಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ನಿಪಿ.3 ಮಹಜರ್ ಮಾಡಿಲ್ಲ, ಮು.ಮಾ.1 ಚಪ್ಪಲಿ ಅಮಾನತ್ ತುಪಡಿಸಿಕೊಳ್ಳದಿದ್ದರೂ ಸಹ ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನು ಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಕೇಸಿಗೋಸ್ಕರ ಮಹಜರ್ ಗಳನ್ನು ಮತ್ತು ಫೋಟೋಗಳನ್ನು ಸೃಷ್ಟಿಸಿರುತ್ತಾರೆ ಎನ್ನುವುದು ಸುಳ್ಳು. ಸದರಿ ಮಹಜರ್ ಠಾಣೆಯಲ್ಲಿ ತಯಾರು ಮಾಡಿದ್ದು , ನಾನು ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎನ್ನುವುದು ಸುಳ್ಳು. ನಂತರ ನಾನು ನಮ್ಮ ಕಛೇರಿಗೆ ಹೋದಾಗ ಸಮಯ ಮಧ್ಯಾಹ್ನ 3–30 ಗಂಟೆ. ಇದಕ್ಕೆ ಸಂಬಂಧಪಟ್ಟಂತೆ ನಾನು ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಲಿಖಿತವಾಗಿ ವರದಿ ನೀಡಿರುವುದಿಲ್ಲ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.